ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 1-6
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಬೋರೇಗೌಡ ಚಿಕ್ಕಮರಳಿ ಅವರ ಕಥೆಗಳಲ್ಲಿನ ಕೌಟುಂಬಿಕ ಚಿತ್ರಣ

**ಡಾ. ಮಂಜು ಸಿ. ಎನ್**
ಸಹಾಯಕ ಪ್ರಾಧ್ಯಾಪಕರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಬೆಂಗಳೂರು.

***Abstract:***
*ಭಾರತ ಹಲವು ಶತಮಾನಗಳಿಂದ ಅವಿಭಕ್ತ ಕುಟುಂಬ ವ್ಯವಸ್ಥೆ ಎಂಬ ರೂಢಿಗತ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದೆ. ತಂದೆ-ತಾಯಿ, ಅವರ ಮಕ್ಕಳು, ಮಕ್ಕಳ ಪತ್ನಿಯರು, ಮೊಮ್ಮಕ್ಕಳು, ಮರಿಮಕ್ಕಳ ಪೀಳಿಗೆಗಳು ಹೀಗೆ ಬೆಳೆಯುತ್ತಾ ಹೋಗುವ ಈ ವ್ಯವಸ್ಥೆಯಲ್ಲಿ ಒಂದೇ ಕುಟುಂಬದಲ್ಲಿ ಹಲವು ಪೀಳಿಗೆಯ ಜನ ಒಟ್ಟಿಗೆ ವಾಸಿಸುತ್ತಾರೆ. ಕುಟುಂಬದ ಅತ್ಯಂತ ಹಿರಿಯ ವ್ಯಕ್ತಿ ಸಾಮಾನ್ಯವಾಗಿ ಪುರುಷ. ಈತ ಅವಿಭಕ್ತ ಕುಟುಂಬದ ಮುಖ್ಯಸ್ಥ. ಇವನು ಕುಟುಂಬದ ಒಳಗೆ ಬಹಳ ಮುಖ್ಯವಾದ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುವವನೂ, ನೀತಿ-ನಿಯಮಗಳನ್ನು ರೂಪಿಸುವವನೂ ಆಗಿರುತ್ತಾನೆ. ಕುಟುಂಬದ ಇತರ ಸದಸ್ಯರೆಲ್ಲರೂ ಇದಕ್ಕೆ ಬದ್ಧರಾಗಿರುತ್ತಾರೆ. ಕೌಟುಂಬಿಕ ನೆಲೆ ಒಂದು ಸಂಸ್ಥೆ. ಸಮಾಜ ರಚನೆಯಲ್ಲಿ ಕುಟುಂಬ ಸಂಸ್ಥೆ ಅತ್ಯಂತ ಚಿಕ್ಕ ಘಟಕವಾದರೂ ಮಹತ್ವದ ಸ್ಥಾನ ಪಡೆದಿದೆ. ಕೌಟುಂಬಿಕ ವ್ಯವಸ್ಥೆಯನ್ನು ಸಂಘವೆಂದು ಕರೆಯಲಾಗಿದೆ. ಅದೊಂದು ಚಿಕ್ಕ ಸಮಾಜ. ಅತ್ಯಂತ ಅನಾಗರಿಕ ಜನರಲ್ಲೂ ಕುಟುಂಬದ ಅರಿವು ಮತ್ತು ಸಾಮೂಹಿಕ ಜೀವನಾಭಿಲಾಷೆ ಕಂಡು ಬರುತ್ತದೆ. ಪ್ರಸ್ತುತ ಲೇಖನದಲ್ಲಿ ಬೋರೇಗೌಡ ಚಿಕ್ಕಮರಳಿ ಅವರ ಕಥೆಗಳಲ್ಲಿನ ಕೌಟುಂಬಿಕ ಚಿತ್ರಣವನ್ನು ಕುರಿತು ವಿವರಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ಗೋಡೆಗಳ ನಡುವೆ, ಆಂತರಿಕ, ಭೂತದ ಕುಣಿತ.*

**ಪೀಠಿಕೆ**

ಕುಟುಂಬದ ಮೂಲ ಅಥವಾ ಆರಂಭವನ್ನು ಐತಿಹಾಸಿಕವಾಗಿ ಹುಡುಕುವುದು ಸಾಧ್ಯವಿಲ್ಲ. ಕುಟುಂಬವಿಲ್ಲದ ವ್ಯಕ್ತಿಗಳೇ ಇಲ್ಲ. ವ್ಯಕ್ತಿಗಳಿಲ್ಲದ ಕುಟುಂಬವೇ ಇಲ್ಲ. ಮಾನವನೇ ಕುಟುಂಬದ ಮೂಲವಾಗುತ್ತಾನೆ. ವ್ಯಕ್ತಿ ಒಬ್ಬೊಂಟಿಗನಾಗಿ ಇದ್ದಾಗ ಕುಟುಂಬ ಎನಿಸಿಕೊಳ್ಳಲಾರ. ಪ್ರತಿಯೊಬ್ಬ ವ್ಯಕ್ತಿಯೂ ಕುಟುಂಬದ ಅನಿವಾರ್ಯ ಅಂಗ. ನಾಗರಿಕತೆ ಬೆಳೆಯದಿದ್ದ ಕಾಲದಲ್ಲಿಯೇ ಕುಟುಂಬ ಇತ್ತೆಂಬುದು ಅನೇಕ ಸಂಶೋಧನೆಗಳಿಂದ ವ್ಯಕ್ತಪಟ್ಟಿದೆ. ಅದು ಬಹು ಹಿಂದಿನಿಂದ ಇತ್ತಲ್ಲದೆ ಕಾಲಕಾಲಕ್ಕೆ ಮಾನವ ಸಮಾಜವನ್ನು ರೂಪಿಸುವಲ್ಲಿ ಮಾರ್ಪಡಿಸುವಲ್ಲಿ ಬಹುಮುಖ್ಯ ಪಾತ್ರವನ್ನೂ ವಹಿಸುತ್ತ ಬಂದಿತು. ಸಮಾಜದಲ್ಲಿ ಅನೇಕಾನೇಕ ಚಟುವಟಿಕೆಗಳು ಹುಟ್ಟಿರುವುದೂ ಮಾನವನ ಕುಟುಂಬದಿಂದ ಮಾತ್ರವೇ ಎನ್ನುವುದು ದೃಢಪಟ್ಟಿರುವ ಸಂಗತಿಯಾಗಿದೆ. ಜಾತಿಪದ್ಧತಿಗಳೂ ಬಡತನ ಸಿರಿತನಗಳೂ ಬಂಧು ಬಳಗವೂ ಸ್ನೇಹಿತ ಮತ್ತು ಶತ್ರುಗಳೂ ಧಣಿ ಮತ್ತು ಸೇವಕರೂ ನೆರೆಹೊರೆ ಮತ್ತು ಸಹೋದ್ಯೋಗಿ ಭಾವನೆಗಳೂ ಕುಟುಂಬದಿಂದ ಉದ್ಭವಿಸುವ ಕುಟುಂಬಕ್ಕೆ

***Please cite this article as:*** ಮಂಜು, ಸಿ. ಎನ್. (2024). ಬೋರೇಗೌಡ ಚಿಕ್ಕಮರಳಿ ಅವರ ಕಥೆಗಳಲ್ಲಿನ ಕೌಟುಂಬಿಕ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 1–6

ಅಂಟಿಕೊಂಡಿರುವ ಜೀವನಯಾತ್ರೆಗೇ ಸಂಬಂಧಪಟ್ಟ ಅಂಶಗಳಾಗಿವೆ. ಅತಿಮುಖ್ಯ ಉದ್ಯಮಗಳಾದ ಕೃಷಿ, ವ್ಯಾಪಾರ, ಕೈಗಾರಿಕೆ ಮುಂತಾದವೂ ಕುಟುಂಬ ಜೀವನದಿಂದ ಉದ್ಭವಿಸಿವೆ. ಆಸ್ತಿ–ಪಾಸ್ತಿಗಳೂ, ಅಂದರೆ ಕಮ್ಮಾರಿಕೆ, ವ್ಯಾಪಾರ, ಬಡಗಿತನ, ಮಡಿವಾಳತನ, ಕ್ಷೌರಿಕಕಸುಬು, ಯೊಧ ಜೀವನ, ಕುಂಬಾರಿಕೆ ಮೊದಲಾದವು ಕುಂಟುಂಬ ಜೀವನದ ಧ್ಯೇಯವನ್ನು ಸಾಧಿಸುವ ಅಂಶಗಳಾಗಿವೆ. ಕುಟುಂಬದ ವ್ಯಕ್ತಿಸಂಬಂಧವನ್ನು ಬಾಂಧವ್ಯ ರೀತಿಯಲ್ಲಿ ರೂಪುಗೊಳಿಸಿದೆ.

ಮಂಡ್ಯ ಜಿಲ್ಲೆಯ ಪ್ರಮುಖ ಕಥೆಗಾರರಾದ ಚಿಕ್ಕಮರಳಿ ಬೋರೇಗೌಡ ಅವರು ತಮ್ಮ ಅನೇಕ ಕಥೆಗಳಲ್ಲಿ ಕೌಟುಂಬಿಕ ನೆಲೆಯನ್ನು ಚಿತ್ರಿಸಿದ್ದಾರೆ. ಅವರ ಹೆಸರಾಂತ ಕಥೆ 'ಗೋಡೆಗಳ ನಡುವೆ' ಕೌಟುಂಬಿಕ ಹಿನ್ನೆಲೆಯನ್ನು ಆಧರಿಸಿದೆ. ರಸ್ತೆಯ ಬದಿಯಲ್ಲಿ ಕುರಿಗಳನ್ನು ಮೇಯಲು ಬಿಟ್ಟು ಕೆಂಪಮ್ಮ ಹೊಂಗೆಯ ಮರದ ನೆರಳಿನಲ್ಲಿ ಕುಳಿತಿದ್ದಳು. ಅವಳ ಮನಸ್ಸೆಲ್ಲಾ ಮನೆಯಲ್ಲಿ ತೊಲೆಗೆ ನೇತುಹಾಕಿ ಬಂದಿದ್ದ ಬಾಡಿನ ಪುಟ್ಟಿಯ ಮೇಲೆ ಇತ್ತು. ಪುಟ್ಟಿಯೊಳಗಿರುವ ಒಂದೂವರೆ ಕೆ.ಜಿ. ಬಾಡನ್ನು ಬೇಯಿಸಿ ಕರೆಯಬೇಕಾದವರನ್ನೆಲ್ಲಾ ಕರೆದು ಉಣ್ಣಲು ಇಕ್ಕಬೇಕಾದ ಗುರುತರ ಜವಾಬ್ದಾರಿ ಇವತ್ತು ಅವಳ ಮೇಲೆ ಬಿದ್ದಿದೆ. ಹಾಳು ಬಾಡನ್ನು ಯಾಕಾದರೂ ತರುತ್ತಾರೋ ಎನಿಸಿತು ಅವಳಿಗೆ. ಬಾಡಿನ ಊಟ ಅವಳಿಗೆ ಇಷ್ಟವಿಲ್ಲವೆಂದಲ್ಲ. ಮಕ್ಕಳು ಮರಿ ಇರುವ ಮನೆಯಲ್ಲಿ ವಾರಕ್ಕೊ, ಹದಿನೈದು, ದಿನಕ್ಕೊ ಒಮ್ಮೆಯಾದರೂ ಬಾಡು ತರದಿದ್ದರೆ ಹೇಗೆ? ಎಂಬುದು ಅವರ ನಿಲವು ಆಗಿತ್ತು. ಬಾಡಿನ ಎಸರು ಮಾಡುವುದು ಅವಳಿಗೊಂದು ದೊಡ್ಡ ಕೆಲಸವಾಗಿರಲಿಲ್ಲ. ಸ್ವಲ್ಪ ಶ್ರಮ ಹೆಚ್ಚು ಎಚ್ಚರಿಕೆ ವಹಿಸಬೇಕು ಅಷ್ಟೆ. ಆದರೆ ತಂದಷ್ಟನ್ನು ಮನೆಯ ಜನರಿಗೆಲ್ಲಾ ಸಮನಾಗಿ ಹಂಚಿ ಎಲ್ಲರ ಕೈಯಲ್ಲೂ ಸೈ ಎನ್ನಿಸಿಕೊಳ್ಳುವುದು ದೊಡ್ಡ ಸಂಕಟವೇ ಆಗಿತ್ತು. ಅವಳಿಗೆ ಹಾಳು ಬಾಡನ್ನು ತಿನ್ನುವುದೂ ಸಾಕು ಈ ಸಂಕಟವೂ ಸಾಕು ಎನಿಸಿತು. ಮನೆಯಲ್ಲಿ ಮೂರು ಜನ ಅಣ್ಣ ತಮ್ಮಂದಿರು. ಮೂರು ಜನ ವಾರಗಿತ್ತಿಯರು. ಅವರ ಮಕ್ಕಳು ನಾಲ್ಕಾರು ಮಂದಿ. ಬಹಳ ಮುತುವರ್ಜಿವಹಿಸಿ ನೋಡಿಕೊಳ್ಳಬೇಕಾದ ಅತ್ತೆ ಮಾವಂದಿರು. ತರುವ ಒಂದು ಕೆ.ಜಿ. ಬಾಡನ್ನು ಇಷ್ಟು ಜನರಿಗೂ ಹಂಚಲು ಎಷ್ಟು ಕಷ್ಟವಾಗಬ್ಯಾಡ. ನಾಲ್ಕು ನಾಲ್ಕು ಚೂರುಗಳು ಬಂದರೆ ಹೆಚ್ಚು. ಹಾಕಿದಷ್ಟನ್ನು ತಿಂದು ಕೈ ತೊಳೆಯದೆ ಸಮಯ ಸಂದರ್ಭ ಯಾವುದನ್ನೂ ನೋಡದೆ ಣೇ ಕೆಂಪೀ, ಇನ್ನೊಂದೆರ್ಡ್ ಚೂರು ಬಾಡ್ ತಕಬಾಣೆ ಎಂದು ಮಾವ ಕೇಳುವಾಗ ಪ್ರಾಣ ಹೋದಂತಾಗುವುದಿಲ್ಲವೇ? ಹಿರಿಯ ಸೊಸೆಯಾದ ಕೆಂಪಮ್ಮನಿಗೇ ಪ್ರತಿ ಸಲವೂ ಈ ಕೆಲಸ ಬರುತ್ತಿದ್ದುದು ಅವಳಿಗೆ ಸಾಕಷ್ಟು ಪಜೀತಿಯನ್ನುಂಟು ಮಾಡಿತ್ತು.

ಮನೆಯ ನಡುವೆ ಎದ್ದಗೋಡೆ ಮನದ ನಡುವೆಯೂ ಎದ್ದಿದೆ. ಆಗೋಡೆ ಮಕ್ಕಳ ಮನಸ್ಸನ್ನು ಭೇದಿಸಬೇಕಲ್ಲ. ದೊಡ್ಡವ್ವ ಕರೆದಳೆಂದು ಓಡಿ ಬಂದು ತಣಿಗೆ ಮುಂದೆ ಕೂತರೆ ಅಕ್ಕೂ ಒಂದೆರಡು ಚೂರು ಹಾಕಲೇಬೇಕು. ಉಂಡಮೇಲೆ ತಮ್ಮ ಅವ್ವಂದಿರ ಬಳಿಗೆ ಹೋದ ಮಕ್ಕಳು ಚಿಟ್ಟನೆ ಚೀರುವುದನ್ನು ಕೇಳಿದಾಗ ಕೆಂಪಮ್ಮನಿಗಾಗುತ್ತಿದ್ದ ಸಂಕಟ ಅಷ್ಟಿಷ್ಟಲ್ಲ. ಒಳಸುಂಟಿ ಹಿಡಿಸಿಕೊಂಡ ಮಕ್ಕಳು ಅವ್ವಾ ನಿನ್ ದಮ್ಮಾಯ್ಯ ಅನ್ತೀನಿ ಗಿಂಡ್ಬ್ಯಾಡ ಇನ್ನೊಂದಪ ಹೋಯಿಕ್ಕಿಲ್ಲ ಎಂದು ಬಾಯಿ ಬಾಯಿ ಬಡಿದುಕೊಳ್ಳುವುದನ್ನು ಕೇಳಿದಾಗ ಕೆಂಪಮ್ಮನ ಹೊಟ್ಟೆಯೊಳಕ್ಕೆ ಹಿಟ್ಟಿನ ದೊಣ್ಣೆ ಹಾಕಿ ತಿರುಗಿದಂತಾಗುತ್ತಿತ್ತು. ಮಾತಾಡಿದರೆ ಜಗಳ ಬಾಯಿ ಕಚ್ಚಿಕೊಂಡು ಸುಮ್ಮನಾಗುತ್ತಿದ್ದಳು. ಸಲಸಲವೂ ಇದನ್ನು ಕಣ್ಣಿಂದ ನೋಡಿ ಕಿವಿಯಿಂದ ಕೇಳಿ ಸೈರಿಸುವುದು ಹೇಗೆ? ಆ ಮಕ್ಕಳನ್ನು ಕರೆಯುವುದೂ ಬೇಡ, ಆ ಸಂಕಟವೂ ಬೇಡ ಎಂದು ಕರೆಯುವುದನ್ನು ನಿಲ್ಲಿಸಿದಳು. ಮಾರನೆಯ ದಿನ ಬೆಳಾಗಾಗುತ್ತಿದ್ದಂತೆಯೇ ದೂರು ಮನೆ ಬಾಗಿಲನ್ನು ತಟ್ಟಿತು. "ಅಲ್ಲಾ ಕನಕ್ಕ ಬಾಯ್ಮಾತ್ತಾಗ್ದ್ರೂ

ಕರೀಯೋದ್ಬ್ಯಾಡ್ವ ಆ ಮುಕ್ಕ ನನ್ನೂ ನನ್ಗಂಡುನ್ನೂ ಕರ್ರ್ಯೂದ್ಬ್ಯಾಡ ನನ್ಮಕ್ಕುಳ್ನಾದ್ರೂ ಕರೆಯೋ ಕರ್ದೇಟ್ಗೆ ಓಡೋಗಿ ಮಡ್ಕೆ ಮೊಗಚ್ಚುಬುಡ್ತಿದ್ವ ನನ್ ಮಕ್ಳು"[1] ಎಂದು ವಾರಗಿತ್ತಿಯರು ತುಟಿ ಉರುಗಿಸಿಕೊಂಡು, ಗಲ್ಲ ತಿರುಗಿಸಿಕೊಂಡು ಆಡಿಕೊಂಡುದ್ದನ್ನು ಅಕ್ಕಪಕ್ಕದ ಜನ ತಂದು ಒಪ್ಪಿಸಿದ್ದರು. ಅಯ್ಯೋ ಅಂದ್ರನ್ನತ್ತವೆ ತಗಿ ಮುಕ್ಕೋಳು, ಅವ್ರ್ ಜೊತೇಲ್ಯಾರು ನಿಂತ್ಕಳೋರು ಎಂದು ಕೆಂಪಮ್ಮ ಮನಸ್ಸಿಗೆ ಕಲ್ಲು ಹಾಕಿಕೊಂಡಿದ್ದಳು. ಕೇವಲ ಚೂರು ಬಾಡಿನ ವಿಷಯಕ್ಕೆ ಅಣ್ಣತಮ್ಮಂದಿರು ದೂರವಾಗುವ ಸನ್ನಿವೇಶವನ್ನು ಈ ಕತೆ ಬಿಂಬಿಸುತ್ತದೆ. ಈ ಮೇಲಿನ ಪ್ರಸಂಗವು ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ಸಣ್ಣ–ಪುಟ್ಟ ಜಗಳಕ್ಕೆ ಹೇಗೆ ಬಿರುಕುಗಳಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಇವರ ಮತ್ತೊಂದು ಕಥೆ 'ಆಂತರಿಕ' ಕೂಡ ಕೌಟುಂಬಿಕ ಹಿನ್ನೆಲೆಯನ್ನು ಆಧರಿಸಿದೆ. ಚಿಕ್ಕಮರಳಿ ಬೋರೇಗೌಡರು ಈ ಕತೆಯಲ್ಲಿ ಹಳ್ಳಿಯ ಕುಟುಂಬದ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ. ನಾಡು ಹೆಂಚಿನ ಹಳೆಯಕಾಲದ ತೊಟ್ಟಿಮನೆ, ಹನ್ನೆರಡು ಕಂಬದ್ದು. ಸುತ್ತವಾ ಒಳಗೂ ಗ್ರಾವಲು ಮಣ್ಣು ಮತ್ತು ಕಲ್ಲು ಬೆರೆಸಿ ಕಟ್ಟಿದ ಮಣ್ಣಿನ ಗೋಡೆ ತುಂಬಾ ಬಂದೂ ಬಸ್ತಾಗಿದೆ. ಉತ್ತರ ದಕ್ಷಿಣವಾಗಿ ಮಲಗದ್ದ ಕಲ್ಲುಹಾಸಿನ ಉದ್ದನೆಯ ತೊಟ್ಟಿಯ ಪಶ್ಚಿಮದ ಬದಿಗಿದ್ದ ತೊಪ್ಪೆ ತಾರಿಸುತ್ತಿದ್ದ ಹಜಾರದ ಮೇಲ್ಪದರದ ಮಣ್ಣನ್ನು ತೆಗೆದು ಜೆಲ್ಲಿ ತುಂಬಿಸಿ ಹತ್ತು ವರ್ಷಗಳ ಹಿಂದೆ ಗಾರೆ ಮಾಡಿಸಿದ್ದುದು ಇನ್ನೂ ಹೊಸದರಂತೆ ಕಾಣಿಸುತ್ತಿದೆ. ಈ ಮನೆಯ ತುಂಬ ಜನವೊ ಜನ. ಅಜ್ಜ–ಅಜ್ಜಿ ಅಪ್ಪ–ಅಮ್ಮ ಮಕ್ಕಳು–ಮೊಮ್ಮಕ್ಕಳು ಮರಿಮಕ್ಕಳು ಹೀಗೆ ಮನೆಯ ತುಂಬಾ ಜನರು ಕಿಕ್ಕಿರಿಯುತ್ತಿದ್ದರು. ತೊಟ್ಟಿಯ ಪೂರ್ವ ಬದಿಗೆ ಪೂರ್ವಕ್ಕೆ ಮುಖ ಮಾಡಿ ದನ ಎಮ್ಮೆಗಳನ್ನು ಕಟ್ಟುವ ಕೊಟ್ಟಿಗೆ ಕೊಟ್ಟಿಗೆಯ ಒಂದು ತುದಿಯಲ್ಲಿ ಆಡು ಕುರಿಗಳನ್ನು ಕಟ್ಟಲು ನೆಲಕ್ಕೆ ನಾಟಿದ ಕಬ್ಬಿಣದ ಗೂಟಗಳು; ಕೋಳಿ ಕೊಕ್ಕರೆಗಳನ್ನು ಕವುಚುವ ಪಂಜರಗಳೂ ಅಲ್ಲೆ ಒಂದು ಕಡೆಗಿವೆ. ಕೊಟ್ಟಿಗೆಯ ಇನ್ನೊಂದು ತುದಿಯಲ್ಲಿ ವ್ಯವಸಾಯದ ಸಲಕರಣೆಗಳನ್ನು ಇಡುವ ಜಾಗ ಹುಲ್ಲು ಸೊಪ್ಪು ಮೊದಲಾದವನ್ನೂ ದಿನ ದಿನ ತಂದು ಅಲ್ಲೇ ಸೇರಿಸಿ ಇಡಲಾಗುತ್ತದೆ. ಹೆಚ್ಚಿನದು ಏನಿದ್ದರೂ ಹೊರಗೆ, ಉತ್ತರಕ್ಕೆ ಮುಖ ಮಾಡಿದ ತಲೆಬಾಗಿಲಿನ ಆಚೆಯ ಜಗುಲಿಯಲ್ಲಿ ತಾತನ ಕಾಲದಿಂದ ಕಟ್ಟುತ್ತಿದ್ದ ದನ ಎಮ್ಮೆಗಳು ಆಡು ಕುರಿಗಳು ನಿಂತು ತುಳಿದು ಮೊಣಕಾಲುದ್ದದ ಗುಂಡಿಗಳನ್ನು ರಚಿಸಿ ಅದರೊಳಕ್ಕೆ ತೊಪ್ಪೆ ಹಾಕಿ ಗಂಜಲ ಹೊಯ್ದು ಎಬ್ಬಿಸುತ್ತಿದ್ದ ಗಬ್ಬನ್ನು ತಪ್ಪಿಸುವುದಕ್ಕಾಗಿಯೂ ದಿನವೂ ಆ ಗುಂಡಿಗಳಿಂದ ತೊಪ್ಪೆ ಗಂಜಲವನ್ನು ಮೇಲೆತ್ತುವ ಆಗಾಗ ಮಣ್ಣು ಸುರಿದು ಮಟ್ಟ ಮಾಡಿಕೊಳ್ಳುವ ತಾಪತ್ರಯದಿಂದ ಮುಕ್ತವಾಗುವುದಕ್ಕಾಗಿಯೂ ಕೊಟ್ಟಿಗೆಗೆ ಕಲ್ಲಿನ ಚಪ್ಪಡಿಗಳನ್ನು ಹಾಸಿ ಚಂದವಾಗಿ ಕಾಣುವಂತೆ ಮಾಡಿಕೊಳ್ಳಲಾಗಿದೆ. ಇದು ಹಳ್ಳಿಯ ಕುಟುಂಬದ ಜನರು ಪಕ್ಷಿಗಳನ್ನು ಸಾಕಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದರಲ್ಲದೆ ಹಳ್ಳಿಯ ಅನೇಕ ಕುಟುಂಬಗಳು ದನ ಕರುಗಳನ್ನು ಸಾಕಿ ಮಾರಾಟ ಮಾಡಿ ಮನೆಯ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸುತ್ತಿದ್ದರು ಎಂಬುದು ಈ ಕಥೆಯಿಂದ ಗೊತ್ತಾಗುತ್ತದೆ.

ಇವರ ಇನ್ನೊಂದು ಕಥೆ 'ಭೂತದ ಕುಣಿತ' ಕೂಡ ಕೌಟುಂಬಿಕ ವಾಸ್ತವ ಚಿತ್ರಣವನ್ನು ತಿಳಿಸುತ್ತದೆ. ಆಸ್ತಿಯ ವಿಚಾರಕ್ಕಾಗಿ ಬೋರಮ್ಮನ ಮಕ್ಕಳಾದ ಶಿವಣ್ಣ ಮತ್ತು ಸಿದ್ರಾಮ ಬೇರೆ ಬೇರೆಯಾಗುವುದನ್ನು ಈ ಕಥೆಯಲ್ಲಿ ಕಾಣಬಹುದು. ಬರುತ್ತೇನೆಂದು ಹೇಳಿದ ಮೇಲೆ ಶಿವಣ್ಣ ತಪ್ಪಿಸಿಕೊಳ್ಳುವವನಲ್ಲ. ನಾಳೆಯೊ ನಾಡಿದ್ದೋ ಬಂದೇ ಬರುತ್ತಾನೆ ಬಂದು ಏನು ಮಾಡುತ್ತಾನೊ ಈ ನನ್ನಾಟಗಳ್ಳ ಏನು ಹೇಳುತ್ತಾನೊ. ಸಾಲ ತೆಗೆದುಕೊಂಡು ನಾನು ಇಟ್ಟುಕೊಳ್ಳಲಿಲ್ಲ. ಅವಳಿಗೆ ಕೊಟ್ಟೆ ಎನ್ನುತ್ತಾನೇನೊ. ದತ್ತುಪುತ್ರನಿಗೆ ನನ್ನ ಆಸ್ತಿಯನ್ನು ಬರೆದುಕೊಟ್ಟಿದ್ದೇನೆಂದು ಛಾಪಾ ಕಾಗದದಲ್ಲಿ ರುಜು

ಒತ್ತಿದ್ದಾಳೆ. ಅವಳ ಆಸ್ತಿ ನನಗೆ ಸೇರಬೇಕು ಎಂದರೂ ಎಂದನೆ. ಮದುವೆಯಾಗುವಾಗ ಬೋರಮ್ಮನವರ ದತ್ತುಪುತ್ರ ಎಂದು ಹಾಕಿಸಿಕೊಂಡಿದ್ದ, ಲಗ್ನ ಪತ್ರಿಕೆಯಲ್ಲಿ ನಾಚಿಗೆಕೆಟ್ಟವನು; ಮಹಾ ಕಷ್ಟಾಸುಖ ನೋಡಿದವನ ಹಾಗೆ. ಆಗಲೇ ಗ್ಯಾನ ಇಳಿಸಿದ್ದರೆ ಚೆನ್ನಾಗಿತ್ತು. ಅವನು ಹಾಗೆಲ್ಲಾ ಹೇಳುವುದೇ ಆದರೆ ಊರವರು ಮಾಡುವುದಾದರೂ ಏನು? ಬೋರಮ್ಮ ಆದದ್ದು ಆಗೋಯ್ತು. ಅವ್ವು ತಾನೆ ಯಾರು ದೂರದೋನ. ಉಂಡು ಬದುಕ್ಲಿಬುಡು. ನೀನು ಸುಮ್ನೆ ಸಿವಣ್ಣನ್ಜೊತೆ ವಂಟೋಗು ಎನ್ನುತ್ತಾರೆ ಅಥವಾ ಹಣ ತಕ್ಕಂಡು ನಮ್ಗೇ ಕರೀದಿಗ್ಬರ್‍ಕೊಡು. ಅವ್ನು ಅದೆಂಗ್ ದಕ್ಕುಸ್ಕಬುಟ್ಯಾನು ನೋಡ್ಕತೀವಿ. ಅನ್ನುತ್ತಾರೊ? ಇದನ್ನೆಲ್ಲಾ ನೋಡಿ ಸಾಕಾಗಿ ಶಿವಣ್ಣ ಅವ್ವಾ ನೀನು ನನ್ಜೊತೇಲಿ ಇರೋದ್ಕಲಿ ಆಸ್ತಿನೂ ಬ್ಯಾಡ ಪಾಸ್ತೀನೂ ಬ್ಯಾಡ. ಯಾರಾರ ಉಣ್ಕರ್‍ಲಿ ಅನ್ನುತ್ತಾನೇನೊ–ಯೋಚಿಸುತ್ತಾ ಹೋದಂತೆ ಬೋರಮ್ಮನಿಗೆ ಯಾವುದೂ ಹೊಳೆಯದೆ ತಲೆ ಸುತ್ತ ತೊಡಗಿತು. ತನ್ನ ಬದುಕಿನಲ್ಲಿ ಕೊರೆ ಬಿದ್ದ ಜಾಗಗಳನ್ನು ತುಂಬಿಕೊಳ್ಳಬೇಕೆಂದು ತಾನು ನಡೆಸಿದ ಹೋರಾಟವೆಲ್ಲ ಹೊಳೆಯಲ್ಲಿ ಹುಣಸೇಹಣ್ಣು ತೇಯ್ದಂತಾಯಿತು ಎನಿಸಿತು. ಅಪ್ಪ ತನಗೆ ಏನು ಮಾಡಿದ? ತನ್ನನ್ನು ಈ ಮನೆಗೆ ಕೊಟ್ಟು ಮದುವೆ ಮಾಡಿದ್ದು ಅವನ ತಪ್ಪೆ? ಮಾಡಿದ್ದು ಆಗಿದೆ. ಚಿನ್ನದಂತ ಇಬ್ಬರು ಮಕ್ಕಳಿದ್ದಾರೆ ಪಾಲಿಗೆ ಬಂದುದನ್ನು ಅನುಭವಿಸಿಕೊಂಡಿರಲಿ ಎಂದು ತನ್ನ ಪಾಡಿಗೆ ತಾನು ಇರದೆ ಮನೆಯ ಮಧ್ಯೆ ಗೋಡೆ ಎತ್ತಿಸಿದುದು ತಪ್ಪೇ? ಅವನು ತನಗಾಗಿ ಕಲ್ಪಿಸಿದುದು ಅದೆಂತ ನೆಲೆ? ಆಸ್ತಿಯನ್ನೆ ತನ್ನ ಹೆಸರಿಗೆ ಬರೆಸಿದ? ಈ ಆಸ್ತಿ ತನಗೆ ಆಧಾರವಾಗುತ್ತದೆಂದು ನಂಬಿದಳು.

ಆದರೆ ಈ ಆಸ್ತಿ ತನಗೆ ಆಧಾರವಾಗುವುದಕ್ಕೆ ಬದಲು ತಾನು ನಿಂತ ನೆಲವನ್ನೇ ಅಲುಗಿಸುತ್ತಿದೆಯಲ್ಲ? ಕುಲ ಚಲ ಮಾತಾಡಿದನಲ್ಲ ಅಪ್ಪ, ಅದು ಇನ್ನೆಂತಹಾ ಕುಲಚಲ? ಅದು ತನಗೊಬ್ಬಳಿಗಾಗಿಯೇ ಇದೆಯೆ? ಕೈಲಾಗ್ದೆ ಹೋದ್ಕಾಲ್ಕೆ ಆಸ್ತಿ ಮೇಗ್ಯಾಸೆಗಾದ್ರೂ ಯಾರಾರ ಒಂದ್ತುತ್ತನ್ನ ಹಾಕ್ತಾರೆ ಕನವ್ವ ಅಂತ ಅವನು ಹೇಳಿದ ಮಾತೂ ನಿಜವಾಗಲಿಲ್ಲವಲ್ಲ? ಆಸ್ತಿಯ ಮೇಲೆ ಜನ ಆಸೆಯನ್ನೇನೊ ಇಟ್ಟುಕೊಂಡಿದ್ದಾರೆ. ಆಸೆಯಿಟ್ಟುಕೊಂಡವರಲ್ಲಿ ಯಾರೊಬ್ಬರು ತನಗೆ ಅನ್ನ ಹಾಕುವಂತೆ ಕಾಣುವುದಿಲ್ಲವಲ್ಲ? ಅವರು ಹಾಕುತ್ತಾನೆಂದರೂ ಅವರ ಕೈನ ಅನ್ನ ಉಣ್ಣುವುದಕ್ಕೆ ತನ್ನ ಮನಸ್ಸು ಒಪ್ಪುತ್ತಿಲ್ಲವಲ್ಲ? ಬೋರಮ್ಮ ಒಂದೇ ಸಮನೆ ಯೋಚಿಸತೊಡಗಿದಳು. ಇಲ್ಲಿ ಗ್ರಾಮೀಣ ಪರಿಸರದ ಕುಟುಂಬದ ವಾಸ್ತವಿಕ ಚಿತ್ರಣವನ್ನು ಕಥೆಗಾರರು ನಿರೂಪಸಿದ್ದಾರೆ. ದೊಡ್ಡ ಕುಟುಂಬ ಕಾಲ ಕ್ರಮೇಣ ಚಿಕ್ಕ–ಚಿಕ್ಕ ಕುಟುಂಬಗಳಾಗಿ ಒಡೆದು ಹೋಗುವ ಸಂಗತಿಯನ್ನು ಈ ಕಥೆ ತಿಳಿಸುತ್ತದೆ. ಬೋರಮ್ಮ ಆಕಾಶಕ್ಕೆ ಕೈಚಾಚಿ "ನಾನೇನ್ ಪಾಪಮಾಡ್ದೆ ಅಂತಾ ನನ್ಗಿಂತ ಕಷ್ಟಕೊಟ್ಟೋ ಹಾಳ್ಮಾನೆ ದೇವ್ರೇ ಅಂತ ಗೋಳಾಡ ತೊಡಗಿದಳು"[2] ಎಷ್ಟು ಯೋಚಿಸಿದರೂ ಹಾಗೆ ಗೋಳಾಡಿ ಎದೆ ಕಚ್ಚಿಕೊಂಡು ಪ್ರಜ್ಞೆ ಕಳೆದುಕೊಂಡು ಇದನ್ನೆಲ್ಲಾ ನೆನಪಿಸಿಕೊಳ್ಳುವುದಕ್ಕೆ ಅವಳಿಂದಾಗುತ್ತಿಲ್ಲ. "ಹೆಂಗಸರೇ ಯಾಕೆ ಹಾಗೆ ಗೋಳಾಡಬೇಕು? ಹೆಂಗರಳು ಎಂಬುದಷ್ಟೇ ಇದಕ್ಕೆ ಕಾರಣವೇ? ಅವರಿಲ್ಲದೆ ನಾವು ಅನಾಥರಾದೊ ಎಂಬುದೊ? ಕೊರೆ ಬಿದ್ದ ಜಾಗಗಳನ್ನು ಅವರು ತುಂಬುವಂತೆ ಬೇರೆಯವರು ತುಂಬಲಾರರೇ? ಗಂಡಸು ಸತ್ತಾಗ ಹೆಂಗಸೇ ಯಾಕೆ ಅನಾಥವಾಗಬೇಕು?"[3] ಎನ್ನುವ ಬೋರಮ್ಮನ ಮಾತು ಪುರುಷ ಪ್ರಧಾನ ಕುಟುಂಬದ ಸ್ಥಿತಿಯನ್ನು ಬಿಂಬಿಸುತ್ತದೆ. ಆಸ್ತಿ, ಮನೆಯ ಭಾಗಕ್ಕಾಗಿ ಎಷ್ಟೋ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ಹೊಡೆದು ಛಿದ್ರವಾಗಿವೆ. ಹುಟ್ಟು ಹುಟ್ಟುತ್ತಾ ಅಣ್ಣ ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು ಎಂಬುದನ್ನು ಈ ಕಥೆ ನಿರೂಪಿಸುತ್ತದೆ.

'ಏಕಾಂಗಿ' ಕತೆಯಲ್ಲೂ ಕೂಡ ಬೋರೇಗೌಡರು ಕೌಟುಂಬಿಕತೆಗೆ ಆದ್ಯತೆಯನ್ನು ನೀಡಿದ್ದಾರೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಬಡತನ ಕುಟುಂಬದ ಸ್ಥಿತಿಗತಿಯನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ನನಗೂ ಈ ಬಡತನ ರೋಸಿ ಹೋಗಿತ್ತು. ಸರೀಕರಂತೆ ನಾನು ಹಿಟ್ಟು ಬಟ್ಟೆಗಾದರೂ ನೆಟ್ಟಗಾಗುವಂತೆ ಬಾಳಬೇಕೆಂಬ ಆಸೆಯಾಯಿತು. ಆಡಿಕೊಳ್ಳುವವರನ್ನು ಕೀಳಾಗಿ ಕಾಣುವವರನ್ನು ದರಿದ್ರ ಎಂದು ಹತ್ತಿರಕ್ಕೆ ಸೇರಿಸಿದವರನ್ನು ಕಂಡಾಗ, ಮನ ನೊಯುವ ಚುಚ್ಚು ನುಡಿಗಳನ್ನು ಕೇಳಿದಾಗ ನನಗೂ ಸ್ವಾಭಿಮಾನ ಎದ್ದು ನಿಂತಿತ್ತು. ಕೀಳಾಗಿ ಕಾಣುವವರನ್ನು ಮೀರಿಸಿ ಬದುಕಬೇಕೆಂಬ ಛಲ ಮೂಡಿತು. ದುಡಿದೆ ಶಕ್ತಿಮೀರಿ ದುಡಿದು ಕೈ ತುಂಬ ಹಣ ಸಂಪಾದಿಸಿದೆ. ಅವಳು ಹೆಣ್ಣೇ ಅವಳು! ಗಂಡಸಿನಂತೆ ಸೊಂಟ ಕಟ್ಟಿನಿಂತು ನನ್ನ ಸಮ ದುಡಿದಳು. ಅವಳ ಕೈ ಹಿಡಿದ ನಾನು ನಿಜವಾಗಿಯೂ ಪುಣ್ಯವಂತ. ಅಪ್ಪ ಬಿಟ್ಟು ಹೋದ ಬಡತನ ನಮ್ಮಿಂದ ದೂರವಾಯಿತು. ಇದ್ದ ಚೂರುಪಾರು ಜಮೀನಿಗೆ ಇನ್ನಷ್ಟು ಸೇರಿಸಿದ್ದೂ ಆಯಿತು. ಊರ ಜನ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಬದುಕತೊಡಗಿದವು. ನನ್ನಿಂದ ದೂರ ಸರಿಯುತ್ತಿದ್ದವರು ತಾವಾಗಿಯೇ ಹತ್ತಿರ ಬರತೊಡಗಿದರು. ನಾವು ಇಷ್ಟೆಲ್ಲಾ ದುಡಿದು ಸಂಪಾದಿಸಿದ್ದಾದರೂ ಯಾರಿಗೆ? ನಾವಿರುವ ತನಕ ನಮ್ಮದು. ಆನಂತರ? ದುಡಿದು ಸಂಪಾದಿಸಿದ ಆಸ್ತಿ ಅನ್ಯಾಯವಾಗಿ ಬೇರೆಯವರ ಕೈ ಸೇರುತ್ತದಲ್ಲಾ ಎಂಬ ಚಿಂತೆಯನ್ನೂ ಅವಳು ದೂರ ಮಾಡಿದಳು. ಐದು ಜನ ಗಂಡು ಮಕ್ಕಳಿಗೆ ಜನ್ಮ ಕೊಟ್ಟಳು. ಇದು ದೊಡ್ಡ ಅವಿಭಕ್ತ ಕುಟುಂಬದಂತೆ ಇತ್ತು. ಐದು ಜನ ಮಕ್ಕಳ ಏಳಿಗೆಗಗಿ ಮತ್ತಷ್ಟು ದುಡಿದಳು. ಸಂಪಾದಿಸಿದ್ದನ್ನು ಉಳಿಸಿ ಕೂಡಿಟ್ಟೆವು ಜೇನು ಹುಳುವಿನಂತೆ. ಉಳಿಸಿದ್ದು ಅನ್ಯರ ಪಾಲಾಗದಂತೆ ಜೋಪಾನವಾಗಿ ಕಾದು ಕೊಂಡೆವು ನಿಧಿ ಕಾಯುವ ಸರ್ಪದಂತೆ. ಕಂಡು ಗೌರವಿಸುತ್ತಿದ್ದ ಜನ ಅಸೂಯೆಪಟ್ಟುಕೊಳ್ಳ ತೊಡಗಿದರು. ಈ ಜನರೇ ಹಿಗೆ ಜನಮೆಚ್ಚುವಂತ ಯಾವ ಕೆಲಸವನ್ನೂ ಮಾಡಲಾಗುವುದಿಲ್ಲ. ನಾವೇನೂ ಜನರನ್ನು ಮೆಚ್ಚಿಸಲು ದುಡಿಯಲಿಲ್ಲ.

ಹಂಚಿಕೊಂಡ ಮೇಲಾದರೂ ನೆಟ್ಟಿಗೆ ಬದುಕಲಿಲ್ಲ. ಒಬ್ಬೊಬ್ಬನದು ಒಂದೊಂದು ಪಾಡು. ಮೂರನೆಯವನು 'ಲಾ' ಓದಿದ್ದವನು ಎಲ್ಲವನ್ನು ಮಾರಿ ಸುಟ್ಟುಕೊಂಡು ಪಟ್ಟಣ ಸೇರಿದ. ಎರಡನೆಯವನು ಆಸ್ತಿಯನ್ನು ಮಾರಿ, ಗಂಟುಮೂಟೆ ಕಟ್ಟಿಕೊಂಡು ಹೆಂಡತಿಯೊಡನೆ ಓಡಿಹೋದ ಮುಟ್ಠಾಳ.... ಅವನ ಮಾವ, ಹೆಂಡತಿಯ ಅಪ್ಪ ಭಾರೀ ವ್ಯಾಪಾರಸ್ಥನಂತೆ ಹೆಂಡತಿಯ ಮಾತನ್ನು ಕೇಳಿಕೊಂಡು ಹೊರಟೇ ಹೋದ. ನಾಲ್ಕನೆಯವನು ಗುಟ್ಟಾಗಿ ಎಲ್ಲವನ್ನೂ ಸುಟ್ಟುಕೊಂಡು ಕಟ್ಟಿಕೊಂಡ ಹೆಂಡತಿಯನ್ನು ಬಿಟ್ಟು, ಯಾವಳನ್ನೋ ಕೂಡಿಕೊಂಡು ಯಾರಿಗೂ ಗೊತ್ತಿಲ್ಲದಂತೆ ಮಾಯವಾದ. ಅವನ ಹೆಂಡತಿ... ಹೇಳಿಕೊಳ್ಳಲು ಅವಮಾನ. ಬಾಳಿ ಬದುಕಿದ ಮನೆಯವಳು ಇಂಥ ಕೆಲಸ ಮಡುತ್ತಾಳೆಂದು ಕನಸಲ್ಲೂ ಎಣಿಸಿರಲಿಲ್ಲ. ಕಂಡ ಕಂಡ ಹೈಕಳ ಜೊತೆ ಕುಣಿದಳು. ಮಾನಬೀದಿ ಪಾಲಾಗುತ್ತದೆಂದು ತಿಳಿದಾಗ ಬಾವಿಗೆ ಬಿದ್ದು ಸತ್ತಳು. ಇನ್ನು ಐದನೆಯವನು ಪೋಲಿ ಪುಂಡರ ಜೊತೆ ಸೇರಿ ಜೂಜು ಕುಡಿತ ಕಲಿತು ಹೆಂಡತಿಗೆ ಕೊಡಬಾರದೆ ಹಿಂಸೆಕೊಟ್ಟು ಅಪ್ಪನ ಮನೆಗೆ ಓಡಿಸಿದ. ತಾನೂ ಜೂಜಾಡಿ ಹಾಳಾದ. ಮೊದಲನೆಯವನು, ಅವನೂ ಐನಾತಿ ಕಳ್ಳ. ನಾಲ್ಕಾಕ್ಷರ ತೋರಿಸಿದ್ದರೆ ಅವನೂ ಇರುತ್ತಿರಲಿಲ್ಲವೇನೋ ಇದ್ದದ್ದನ್ನು ಮಾರಿ ಕೇರಿ ಅಲ್ಪಸ್ವಲ್ಪ ಉಳಿಸಿಕೊಂಡು ಪೋಲಿ ಅನ್ನಿಸಿಕೊಂಡು ಕಾಲ ಕಳೀತವ್ನೆ"[4]. ಇದು ಐದು ಜನ ಮಕ್ಕಳನ್ನು ತಂದೆ ತಾಯಿಗಳು ಹೆತ್ತು ಹೊತ್ತು ಸಾಕಿ ಸಲುಹಿದರೂ ಕೊನೆಗಾಲದಲ್ಲಿ ಅವರನ್ನು ದೂರ ಮಾಡಿ ಆಸ್ತಿಗಾಗಿ ಒಬ್ಬೊಬ್ಬರೂ ಹೊಡೆದಾಡಿಕೊಂಡು ತಂದೆ ತಾಯಿಯಿಂದ ದೂರವಾಗುವ ಪ್ರಸಂಗವನ್ನು ತಿಳಿಸುತ್ತದೆ.

ಮಗನ ಆಶ್ರಯ ಪಡೆಯಲೆಂದು ಬಂದವನಿಗೆ ಸೊಸೆಯು ಆಡುವ ಚುಚ್ಚು ಮಾತುಗಳು ಮತ್ತೆ ಅವನನ್ನು ಮನೆಯಿಂದ ದೂರ ಮಾಡಿತು. ಕೊನೆಗೆ ಕಾಡನ್ನು ಸೀಳಿಕೊಂಡು ಹೋಗುತ್ತಿದ್ದ ಕಾಲುದಾರಿಯಲ್ಲಿ ಮುದುಕ ಹೋಗುತ್ತಲೇ ಇದ್ದ. ಮುಂದೆ ಹೋದಷ್ಟೂ ದಾರಿ ಸಾಗುತ್ತಲೇ ಇತ್ತು. ಎಲ್ಲವನ್ನು ಕಳೆದುಕೊಂಡ ಮೇಲೂ ಇನ್ನು ತನ್ನದೆಂಬುದು ಏನೂ ಇದೆ ಎನ್ನಿಸಿ ಹೆಗಲಿಗೆ ಕೈ ಹಾಕಿದ. ಕೊನೆಯದಾಗಿ ಉಳಿದಿದ್ದ ಅವನ ಆಸ್ತಿ ಕರೀಕಂಬಳಿ ಹೆಗಲ ಮೇಲಿರಲಿಲ್ಲ. ಅವನು ಚಿಂತೆಯಲ್ಲಿ ಮುಳುಗಿ ಸಾಗುತ್ತಿದ್ದಾಗ ಅವನ ಗಮನಕ್ಕೆ ಬರದಂತೆ ಎಲ್ಲಿಯೋ ಬಿದ್ದು ಹೋಗಿತ್ತು. ಒಂದು ಕ್ಷಣ ನಿಂತು ಸುತ್ತಲೂ ನೋಡಿದ. ದಟ್ಟವಾದ ಕಾಡು. ಬೆಳೆದು ನಿಂತ ಹೆಮ್ಮರಗಳು ದೈತ್ಯಕಾರದ ಬಂಡೆಗಳು. ಒಂದು ಬಡ ಜೀವವೂ ಕಣ್ಣಿಗೆ ಕಾಣಿಸದು. ಆ ಘೋರ ಕಾನನದಲ್ಲಿ ತಾನೊಬ್ಬನೇ ಏಕಾಂಗಿ. ಸುತ್ತಲೂ ಶ್ಮಶಾನ ಮೌನ. ಅವನೊಮ್ಮೆ ಜೋರಾಗಿ ನಕ್ಕ. ಮೌನ ಕದಡಿ ಅವನನ್ನು ಅಣಕಿಸುವಂತೆ ಇಡೀ ಕಾನನವೇ ಮತ್ತೆ ಮತ್ತೆ ನಕ್ಕಿತು. ಪುನಃ ಅದೇ ಮೌನ. ಮುದುಕ ಮುಂದಕ್ಕೆ ಸಾಗಿದ. ತಿರುವು ಮುರುವುಗಳಿಂದ ಕೂಡಿದ ಕಾಲು ದಾರಿಯಲ್ಲಿ ತಾನೊಬ್ಬನೆ ನಡೆಯುತ್ತಿದ್ದ. ಪಡುವಣ ದಿಕ್ಕಿನಲ್ಲಿ ಸೂರ್ಯ ಕ್ರಮೇಣ ಅಸ್ತಮಿಸಿದ. ಈ ಮೇಲಿನ ಪ್ರಸಂಗವು ಬಡತನದಿಂದ ಬಂದ ತಂದೆ ತಾಯಿಗಳು ಮಕ್ಕಳಿಗಾಗಿ ತಮ್ಮ ಜೀವವನ್ನೇ ಮುಡುಪಾಗಿಟ್ಟು ಕೌಟುಂಬಿಕ ಜವಾಬ್ದಾರಿಯನ್ನು ಸಾಮಾನವಾಗಿ ಹಂಚಿಕೆ ಮಾಡಿದರೂ ಅದನ್ನು ಉಳಿಸಿಕೊಳ್ಳಲಾರದ ದುರಂತವನ್ನು ಈ ಕಥೆಯು ತಿಳಿಸುತ್ತದೆ. ಇಡೀ ಕುಟುಂಬದ ಜವಾಬ್ದಾರಿಯನ್ನು ಹೊತ್ತ ತಂದೆ ತಾಯಿಗೆ ಕೊನೆಗೆ ಸಿಕ್ಕದ್ದು ಸಾವೇ ಹೊರತು ಮತ್ತೇನೂ ಅಲ್ಲ...? ಎಂಬುದು ಈ ಕಥೆಯಿಂದ ತಿಳಿಯುತ್ತದೆ. ಹೀಗೆ ಚಿಕ್ಕಮರಳಿ ಬೋರೇಗೌಡರು ತಮ್ಮ ಅನೇಕ ಕಥೆಗಳಲ್ಲಿ ಕೌಟುಂಬಿಕ ಚಿತ್ರಣವನ್ನು ವಿಭಿನ್ನವಾಗಿ ಗುರುತಿಸಿದ್ದಾರೆ.

**ಕೊನೆಟಿಪ್ಪಣಿಗಳು**


1. ಬೋರೇಗೌಡ ಚಿಕ್ಕಮರಳಿ. (2006). *ಗೋಡೆಗಳ ನಡುವೆ.* ಅನಿಕೇತನ ಪ್ರಕಾಶನ. ಪು.ಸಂ. 15
2. ಅದೇ. ಪುಟ. 40
3. ಅದೇ, ಪುಟ. 40
4. ಬೋರೇಗೌಡ ಚಿಕ್ಕಮರಳಿ. (1986). *ಏಳುಸುತ್ತಿನ ಕೋಟೆ.* ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ. ಪು.ಸಂ. 12